ಯೋಜನ ಸರ್ಕಾರಕ್ಕೆ ಇದಯೇ?

ಬ) ಹಾಗಿದ್ದಲ್ಲಿ ಈ ಕೆಲಸಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು.

ಇ) ಇದಕ್ಕೆ ಇದುವರೆವಿಗೂ ಏನಾದರೂ ಹಣವನ್ನು ಬಿಡುಗಡೆ ಮಾಡಿದೆಯೇ? ಹಾಗಿದ್ದಲ್ಲಿ ಒಟ್ಟು ಎಷ್ಟು ಹಣವನ್ನು ಬಿಡುಗಡೆ ಮಾಡಿದೆ? ಒಟ್ಟು ಅಂದಾಜು ತಗಲುವ ವೆಚ್ಚವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ತುಂಗಭದ್ರಾ ಯೋಜನೆಯ ನೀರಾವರಿ ಸಲಹಾ ಸಮಿತಿಯು ಈಗಾಗಲೇ ತೀರ್ಮಾನ ತೆಗೆದುಕೊಂಡಿರುವಂತೆ ಈ ಕೆಲಸಗಳನ್ನು ದಿನಾಂಕ 1-4-96 ರಿಂದ 15-6-1996ರ ವರಗೆ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಇ) ಹೌದು, ಬಿಡುಗಡೆ ಮಾಡಲಾಗಿದೆ. 31-1-96ರವರೆಗೆ ಈ ಕೆಲಸಗಳಿಗೆ ರೂ. 1.45 ಕೋಟಿ ಬಿಡುಗಡೆ ಮಾಡಿದೆ.

ಈ ಕಾಮಗಾರಿಗಳಿಗೆ ತಗಲುವ ಒಟ್ಟು ಅಂದಾಜು ವೆಚ್ಚ ರೂ. 19.665 ಕೋಟಿ.

ತುಂಗಭದ್ರಾ ಎಡದಂಡೆ ಕಾಲುವೆ ದುರಸ್ಥಿ

677 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯ 18ನೇ ಮೈಲಿನಲ್ಲಿ ರಂಧ್ರವೊಂದು ಕಾಣಿಸಿಕೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಈ ರಂಧ್ರ ಮುಚ್ಚುವಲ್ಲಿ ಸರ್ಕಾರ ಯಶಸ್ವಿಯಾಗಿದೆಯೇ

ಇ) ಇದಕ್ಕಾಗಿ ಆದ ಒಟ್ಟು ವೆಚ್ಚವೆಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಪ್ರಸ್ತುತ ನೀರಾವರಿ ವರ್ಷದಲ್ಲಿ ಮೈಲ್ 18ರಲ್ಲಿ ಯಾವುದೇ ರಂಧ್ರವಾಗಿರುವುದಿಲ್ಲ.

ಆ) ಯಾವುದೇ ರಂಧ್ರ ಕಾಣಿಸದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಯಾವುದೇ ಖರ್ಚು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅರಕ್ಷಕ ಉಪ ನಿರೀಕ್ಷಕರ ನೇಮಕಾತಿ.

678 - ಶ್ರೀ ಅಮರೇಗೌಡ ಪಾಟೀಲ್ (ಲಿಂಗಸುಗೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992-93 ರಿಂದ ಇಲ್ಲಿಯವರೆಗೂ ರಾಜ್ಯದಲ್ಲಿ ನಡೆದಿರುವ ಆರಕ್ಷಕ ಉಪ ನಿರೀಕ್ಷಕರುಗಳ ನೇಮಕಾತಿ ಸಂಖ್ಯೆ ಎಷ್ಟು?

ಆ) ಹಾಗಿದ್ದಲ್ಲಿ ವಿಭಾಗ ಮಟ್ಟದಲ್ಲಿ ಆದ ನೇಮಕಾತಿ ಸಂಖ್ಯೆ ಎಷ್ಟು?

ಇ) ಹಿಂದುಳಿದ ಪ್ರದೇಶಗಳಾದ ಗುಲ್ಬರ್ಗಾ ಮತ್ತು ಬೆಳಗಾಂ ವಿಭಾಗದಿಂದ ಬಂದಿರುವ ಅಭ್ಯರ್ಥಿಗಳಿಗೆ ವಿಶೇಷ ಆದ್ಯತೆ ನೀಡಿ ನೇಮಕಾತಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೆ?

ಈ) ಮೈಸೂರು, ಬೆಂಗಳೂರು ವಿಭಾಗದಿಂದ ಹೆಚ್ಚಿನ ಸಂಖ್ಯೆಯಲ್ಲಿ ನೇಮಕಾತಿ ಹೊಂದುತ್ತಿರುವ ಅಭ್ಯರ್ಥಿಗಳಿಗಿಂತ ಗುಲ್ಬರ್ಗ ಮತ್ತು ಬೆಳಗಾಂ ವಿಭಾಗದ ಅಭ್ಯರ್ಥಿಗಳ ಸಂಖ್ಯೆ ಕಡಿಮೆ ಪ್ರಮಾಣದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಇದಕ್ಕೆ ಕಾರಣವೇನು? ಮತ್ತು ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಗೃಹ ಸಚಿವರು) :

ಅ) 164 ಸಿವಿಲ್
15 ಸಿ.ಎ.ಆರ್:ಡಿ.ಎ.ಆರ್
15 ಕೆ.ಎಸ್. ಆರ್.ಪಿ
194 ಒಟ್ಟು

ಆ) ಹಾಲಿ ಜಾರಿಯಲ್ಲಿರುವ ನೇಮಕಾತಿ ನಿಯಮಗಳ ಪ್ರಕಾರ ವಿಭಾಗ ಮಟ್ಟದಲ್ಲಿ ನೇಮಕಾತಿಗೆ ಅವಕಾಶವಿಲ್ಲ.

ಇ) ಇಲ್ಲ.

ಈ) ಮೇಲೆ ಹೇಳಿದ ನೇಮಕಾತಿಯಲ್ಲಿ ಇಂಥ ಪರಿಸ್ಥಿತಿ ಉದ್ಭವಿಸಿರುವುದು ನಿಜ.

ಉ) ಗುಲ್ಬರ್ಗಾ ಮತ್ತು ಬೆಳಗಾಂ ವಿಭಾಗದ ಅಭ್ಯರ್ಥಿಗಳು ಮೆರಿಟ್ ಲಿಸ್ಟಿನಲ್ಲಿ ಅರ್ಹತೆ ಪಡೆಯಲು ವಿಫಲರಾದುದೇ ಕಾರಣ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ತೋರಿಸಿದ ಅರ್ಹತೆಯನುಸಾರ ನೇಮಕಾತಿ ಮಾಡಿರುವುದರಿಂದ ಈ ಬಗ್ಗೆ ಯಾವುದೇ ಕ್ರಮದ ಅವಶ್ಯಕತೆಯಿಲ್ಲ.

ವಿರಾಜಪೇಟೆ ತಾಲ್ಲೂಕಿನಲ್ಲಿ ಮದ್ಯಪಾನದಂಗಡಿಗಳಿಗೆ ಪರವಾನಿಗೆ.

639 - ಶ್ರೀ ಪಿ.ಜಿ. ಬಸವರಾಜು (ವಿರಾಜಪೇಟೆ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕಿನಲ್ಲಿರುವ ಸಾರಾಯಿ, ಮದ್ಯಪಾನ ಅಂಗಡಿ ಮತ್ತು ಬಾರಗಳು ಒಟ್ಟು ಸಂಖ್ಯೆ ಎಷ್ಟು? ಮತ್ತು ಎಲ್ಲಾ ಅಂಗಡಿಗಳು ಈ ಬಗ್ಗೆ ಪರವಾನಿಗೆ ಪಡೆದಿವೆಯೇ?

ಆ) ಪರವಾನಿಗೆ ಪಡೆಯದ ಅಂಗಡಿಗಳು ಸಂಖ್ಯೆ ಎಷ್ಟು? ಹಾಗೂ ಸರ್ಕಾರ ಈ ಬಗ್ಗೆ